Regd No M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 100] ಗುರುವಾರ 19—2—48 [ಬಿಡಿ ಪ್ರತಿ 3 ಪೈ

ಮತ್ತೆ ಆಹಾರ ರೇಷನ್ ತನಿ !

ಮಹಿಳಾ ಮೆರವಣಿಗೆ

'ನನ್ನಂಥಾ ನೂರಾರು ಮಂದಿ ನಾಶವಾಗಲಿ, ಆವರೆ ಸತ್ಯವು ಬಾಳಲಿ' ಎಂದು ಮಹಾತ್ಮಾಜೀಯವರ ದಿವ್ಯ ಸಂದೇಶವಿತ್ತು. ಈ ದಿವ್ಯ ಸಂದೇಶಗಳನ್ನು ಬೇರೆಬೇರೆ ಭಾಷೆಗಳಲ್ಲಿ ಬರೆದ ಫಲಕಗಳನ್ನು ತೆಗೆಮಕೊಂಡು ಮುಂಬಯಿಯಲ್ಲಿಯ ಸಾವಿರಾರು ಮಹಿಳೆಯರು ಮೊನ್ನೆ ಭಾರಿ ಶಾಂತಿ ಮೆರವಣಿಗೆ ನಡೆಸಿ, ಚೌಪಾತಿಯಲ್ಲಿ ಪ್ರಚಂಡ ಸಭೆ ನಡೆಸಿದರು. ಇದರಲ್ಲಿ ಹಿಂದು, ಮುಸಲ್ಮಾ, ಜ್ಯೂ ಮತ್ತು ಕ್ರೈಶ್ಚಿಯ್ ಮಹಿಳೆಯರು ಭಾಗವಹಿಸಿದ್ದರು.

ಆಶ್ಚರ್ಯಗಳು

ಜನಾಬಾಗಳನ್ನು ಮಡಿಸಿ ಕವರುಗಳಲ್ಲಿಟ್ಟು ಅಂಟಿಸುವ ಯಂತ್ರಗಳಿವೆ. ಕವರನ್ನು ತೆರೆಮುಲು ಯಂತ್ರಗಳು ಕೂಡ ಇವೆ-

ಲೆಕ್ಕಗಳನ್ನ ತನಗೆತಾನೇ ಮಾಡುವ 'ಎಲೆಕ್ಟ್ರಿಕ್' ಬ್ರೈನ್ಸ್' ಎಂಬ ಯಂತ್ರವಿದೆ.

ಟ್ರೇಡ್‌ಬೋರ್ಡ್ ಪಾರ್ಲಮೆಂಟರಿ ಸೆಕ್ರಿಟರಿ ಬೆಲ್‌ಬೀರ್ ಆಫೀಸಿನ ಪ್ರದರ್ಶನಕ್ಕೆ 20 ನಿಮಿಷಗಳು ಅಲಸ್ಯವಾಗಿ ಒಂದನು. ಯಂತ್ರದಲ್ಲಿ ಒಂದು ಕಾರ್ಡನ್ನಿಟ್ಟಾಗ ಬೆಲ್‌ಬೀರ್ ಜಾರ್ಜ್ 19 ವರೆ ನಿಮಿಷ ಅಲಸ್ಯವಾಗಿ ಒಂದನು ಎಂದು ಬರೆದು ಅಚ್ಚುಹಾಕಿದ ಕಾರ್ಡ್ ಯಂತ್ರದಿಂದ ಬಂದಿತು. ಎಷ್ಟು ಆಶ್ಚರ್ಯವಾದ ವಿಷಯ ನೋಡಿ.

Edited, Printed and Published by M S Krishna Rao at the Satyavadi Press Chamaraja Agrahar Mysore

ಮದರಾಸು ಫೆ 18 — ಮದರಾಸಿಗೆ ಆಹಾರ ಧಾನ್ಯ ಸಂಬರಾಜು ಬಗೆಗೆ ಪರ್ಯಾಲೋಚಿಸಲು ಭಾರತ ಆಹಾರ ಮಂತ್ರಿ ಶ್ರೀ ಜೈರಾಂದಾಸ್ ದೌಲತ್ ರಾಂರವರು ನೇಮಿಸಿದ ಸಮಿತಿಯವರು ಮತ್ತೆ ಪ್ರಾಂತ್ಯದಲ್ಲೆಲ್ಲಾ ಆಹಾರ ಧಾನ್ಯ ಹತೋಟಿಯಲ್ಲಿಟ್ಟು ದೇಶನಿಂಗ್ ಜಾರೀ ತರಬೇಕೆಂದು ಶಿಫಾರಸು ಮಾಡಬಹುದೆಂದು ಹೇಳಲಾಗಿದೆ.

ಕುಂಭಕೋಣ — ತಿರುವಾನಂದಾಲಿನ ಕಾಶೀ ಮಠದ ಜಗದ್ಗುರುಗಳು ರೂ. 150000 ಉದಾರ ದಾನವಿತ್ತು. ಆದರ ಉತ್ಪತ್ತಿಯಿಂದ ಕಾಶೀ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರಿಗೂ, ಮಧುರಾ, ಕುಂಭಕೋಣ ಹೈ ಸ್ಕೂಲು ವಿದ್ಯಾರ್ಥಿನಿಯರಿಗೂ ವೇತನ ಕೊಡಬೇಕೆಂದು ಸೂಚಿಸಿರುವರು.

ಮೈಸೂರು ಫೆ 19 — ತಾ || 16 ರ ಪೌನಸಭೆಯು ನಿಗಾಟಿಗಿಲ್ಲಿ ವಿಲೇವಾರಿಯಾದ ವಿಷಯಗಳನ್ನ ಪರ್ಯಾಲೋಚಿಸಲು ಈ ದಿನ ಸಭೆ ಸೇರಿತ್ತು.

ಮೈಸೂರು ಡಿ 19 — ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗ್ ಮಾರ್ಚ್ ತಾ || 1 ರಲ್ಲಿ ನಡೆಯುವುದು.

ಔಂಗಾಬಾದ ಪೋಲೀಸು ಚೌಕಿಯಲ್ಲಿ 2 ಬಾಂಬು ಎಸೆಯಲಾಯಿತು. ಇಬ್ಬರು ಗಾಯಗೊಂಡರು

ಇನ್ನೂರು ಕೋಟಿ ಪೌಂಡಿನ ಅಂತರರಾಷ್ಟ್ರೀಯ ಲಾಟರಿ ನಡೆಸಬೇಕೆಂಬ ಯೋಜನೆಯನ್ನು ಬ್ರಿಟಿಷ್ ಆರ್ಥಿಕ ಸಚಿವ ಕ್ರಿಪ್ಸ್ ತಿರಸ್ಕರಿಸಿದ್ದಾರೆ

ಕಳೆದು ಹೋಗಿದ್ದ ಗಾಂಧೀಜೀ ಪಾದರಕ್ಷೆ ನಿರಾಶ್ರಿತನಿಂದ ಸಿಕ್ಕಿದೆ

Save the Cow
ಗೋ ವಧೆ ನಿಲ್ಲಲಿ

ಏಕದಂ ಸರ್ಗ

ಏ

(ಇಂಡಿಯರ್) ಯೂನಿಯನ್ನಿನ ಗಾಳಿಯು ಕೂಡ ಹೈದರಾಬಾದಿನ ಮೇಲೆ ಬೀಸಕೂಡದು.— ಕಾಶಿಂಜ್ವಿ ' ಇತ್ತಿಹಾದ್' ಅಧ್ಯಕ್ಷ

ಕಾಶಿಂ ರಜ್ವಿ 'ಮ್ಯೂಸಿಯು ಬಂದು ರೆಸಿಡೆನ್ಸಿ ಭವನದಲ್ಲಿ ಇದ್ದಲ್ಲಿ ಅದನ್ನು ಬೀಳಿಸಿ ಆವಣ್ಣನ್ನು ಮೂಸೀ ನದಿಯಲ್ಲಿ ಕಲಿಸುತ್ತೇನೆ' ಎಂದು ನುಡಿದನು. ರಾವೇಶ್ವರದಿಂದ ಮರಳನ್ನು ತೆಗೆದುಕೊಂಡು ಹೋಗಿ ಕಾಶಿಯಲ್ಲಿ ಗಂಗಾನದಿಯಲ್ಲಿ ಕಲಸಿದಲ್ಲಿ ಪುಣ್ಯ ಪ್ರಾಪ್ತಿ ಎನ್ನುವರು. ಕಾಶಿಂ ರಜ್ವಿ ಕಾಶೀರಾಮೇಶ್ವರವಿಲ್ಲದೇಯೇ, ಮೂಸಿಯಲ್ಲಿ ರೆಸಿಡೆನ್ಸಿ ಭವನದ ಎಲಚುಗಳನ್ನು ಕಲಿಸಲು ಬಯಸಿದ ಕಾರಣದಿಂದ, ನಡುವೆ ಮಜಲಿಗಳಿಲ್ಲದೆಯೇ ಸ್ವರ್ಗಕ್ಕೆ ಹೋಗಿ ಸೇರಿಕೊಳ್ಳುತ್ತಾನೆ. ಸೂಕ್ಷ್ಮದಲ್ಲಿಯೇ ಮೋಕ್ಷ. ಈ ಅವಕಾಶ ಕಲ್ಪಿಸಿದ್ದಕ್ಕಾಗಿ ನ್ಯಾಯವಾದ ಮ್ಯೂಸೀಗೆ ರಜ್ವೀ ಫೀಜನು ಕೊಡಬೇಕಾಗಿದ್ದುತ್ತದೆ [ಜ್ಯಾ

ಧನಿಕರ ಆದಾಯ

ಕಾರ್ಖಾನೆಗಳಲ್ಲಿಯ ಎಂಟು ಸಾವಿರ ಶ್ರಮಿಕವರ್ತ್ತರ ಆದಾಯವು ಅಲ್ಲಿ ಕೆಲಸ ಮಾಡುವ ಐವತ್ತು ಸಾವಿರ ಕೆಲಸಗಾರರ ಕುಟುಂಬಗಳ ಆದಾಯಕ್ಕೆ ದ್ವಿಗುಣವಾಗಿದೆ. ಐವತ್ತು ಸಾವಿರ ಕಾರ್ಮಿಕರ ಕುಟುಂಬಗಳ ಆದಾಯ ವರ್ಷಕ್ಕೆ ಎರಡು ಕೋಟಿ 96 ಲಕ್ಷ ಎಂದು ಮಂದಿ ಬಂಡವಾಳಗಾರರ ಲಾಭ ನಾಲ್ಕು ಕೋಟಿ 29 ಲಕ್ಷ. ಕುಟುಂಬಗಳಲ್ಲಿ ದುಡಿಯುವವರೆಲ್ಲರೂ ಸಂಪಾದನೆ ಮಾಡುತ್ತಿರುವರೆಂದುಕೊಂಡು ಒಟ್ಟಿನಲ್ಲಿ ಲೆಕ್ಕ ಮಾಡಿದಲ್ಲಿ ಕಾರ್ಮಿಕನ ಸಂಪಾದನೆಯು ಒಂದು ರೂಪಾಯಿ ಆದಲ್ಲಿ ಬಂಡವಾಳಗಾರನ ಆದಾಯವು 190584 ಆಗಿರುತ್ತದೆ : ಭಾರತದಲ್ಲಿ ಲೇಬರರ್ಸ್ ಕ್ಯಾಪಿಟಲಿಸ್ಟರಿಗೆ ಇಷ್ಟು ವೈತ್ಯಾಸವಿರುವವರೆಗೂ ಭಾರತದಲ್ಲಿಯ ಆರ್ಥಿಕ ಪರಿಸ್ಥಿತಿಗಳು ಉತ್ತಮಗೊಳ್ಳಲಾರವು, ತೆರಿಗಿಸಿ ಹೆಚ್ಚು ಲಾಭಕ್ಕೆ ಅಡೆಯೊಡದ ಮಾತ್ರಕ್ಕೇ ಪಾರ್ಲಿಯವಾಗುವುದೆಂದು

ಪಾಕಿಸ್ತಾನ ಕಥೆ

—

ಇಬ್ಬರು ಹುಡುಗಿಯರು

(ಮುಂದುವರಿದುದು)

ಯುವಕನಿಗೆ ಏನು ಹೇಳಬೇಕೆಂದು ತಿಳಿಯದಾಯಿತು. ಆತನ ಕಣ್ಣುಗಳೂ ನೆನೆದುವು 'ನಾವೆಲ್ಲಾ ಹುಟ್ಟಿರುವುದು ಪ್ರಯೋಜನ, ನಮ್ಮ ಸ್ತ್ರೀಯರು ಇಂತಹ ದುರಂತಗಳಿಗೂ ಸಿಕ್ಕಿಹುದೆ ?' ಎಂದು ಯೋಚಿಸಿದ ಆ ಸು ಹುಡುಗಿಯರನ್ನು ಕುರಿತು 'ನಿಮ್ಮ ಬೇಡಬೇಕಾದುದೇನಿದೆ. ಆಪತ್ತಿಗೆ ಗಾದವರನ್ನು ರಕ್ಷಿಸುವುದು ಮನುಷ್ಯ ಮಾತ್ರರ ಕರ್ತವ್ಯ. ಹೀಗಿರುವಾಗ ಅಸಹಾಯ ಬಾಲಿಕೆಯರಾದ ನಿಮ್ಮನ್ನು ಈ ಸ್ಥಿತಿಯಿಂದ ಪಾರುಗಾಣಿಸಲು ನನಗೆ ಪ್ರಾರ್ಥಿಸಬೇಕಾಗಿಲ್ಲ ನಿಮ್ಮಾ ಸ್ಥಿತಿಯನ್ನು ಕಂಡಾಗಿನಿಂದಾ ನನ್ನ ಮನಸ್ಸು ಎಷ್ಟು ಕೊರೆಯುತ್ತಿದೆಯೆಂದರೆ ದು ನನಗೇ ಗೊತ್ತು. ಆದರೆ ಈ ಪಜರದಿಂದ ನಿಮ್ಮನ್ನು ಹೇಗೆ ಬಿಡಿಸಲೆಂಬುದೇ ನನಗೆ ತೋರದಾಗಿದೆ

ಕೂಡಲೇ ಮರಾಠಿ ಹುಡುಗಿಯು 'ದಾರಿಯು ಸುಲಭವಾಗಿದೆ. ನಿಮಗೆ ತಿಳಿದೇ ಇರುವುದು' ಎಂದಳು.

ಎರಡನೇ ಹುಡುಗಿಯು 'ನೀವು ಮುಸಲ್ಮಾನರಾಗಿ ನಮ್ಮನ್ನು ಮದುವೆಯಾಗಿರಿ' ಎಂದು ಲಜ್ಜೆಯಿಂದ ಹುಸಿನಗುವೊಂದನ್ನು ನಕ್ಕಳು. ಈಗ ಮೂರು ತಿಂಗಳಿಂದ ಅವಳು ನಕ್ಕುದು ಇದೇ ಮೊದಲು.

ಯುವಕನು 'ಸರಿ, ಅದೇ ಉಪಾಯ ಬೇರೆ ಉಪಾಯವು ಪ್ರಕೃತ ಅಸಾಧ್ಯ. ನೀವು ಚಿಂತಿಸಬೇಡಿರಿ ನಿಮ್ಮನ್ನು ಹೇಗಾದರೂ ಮಾಡಿ ನಾನು ಉದ್ಧಾರ ಮಾಡುವೆ' ಎಂದು ಭರವಸೆಯನ್ನಿತ್ತು ಕೂಡಲೇ ಆತನು ಈ ವಿಚಾರವಾಗಿದ ಲಾಲಿಗಳೊಡನೆ ಮಾತನಾಡಲೇ ಎಂದು ತರ್ಕಿಸಿದ ಆತನು ಆತುರದಿಂದ 'ಈಗಲೇ ನಿಮ್ಮನ್ನು ಮದುವೆಯಾಗುವ ವಿಷಯು ಅವರೊಡನೆ ಮಾತನಾಡಲೇ ? ಆಗುಂಡಿಯನ್ನೊತ್ತಿದರೆ ಅವರು ಬರುವರು' ಎಂದ

ಹುಡುಗಿಯರು ಅಯ್ಯೋ

ಕಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನಗಳವು ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಆಹಾರ ಪನಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ, ಅತಿ ಸುಮನೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ. ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಗಲ ಉಪಯೋಗಿಸಿದಲ್ಲಿ ಮತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ, ಇದನ್ನೇ ಸದಾ ಉಪಯೋಗಿಸುವಂತೆ ಪ್ರೇರೇಪಿಸುವುದು ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಓ ಂ ದ ಸೇರು ಅರ್ಧ ಸೇರು, ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3–8–0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವಶ್ರೇಷ್ಠ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ.

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈಸೂರು

ಮರದ ಸಾಮಾನುಗಳು

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು

ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು

ಉಪಯೋಗಿಸುವವರೆ ಅನುಕೂಲಾನುಗಳನ್ನು ವಿಮರ್ಶಿಸಲಿ

ಅವರವರ ಇಷ್ಟಾನುಗುಣವಾಗಿ, ಕುಶಲಗಾರರಾದ ಕೆಲಸಗಾರರಿಂದ

ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್

ಮೈಸೂರು

SHAKTI
SUDHA

Superb T[illegible] Tempor[illegible]

SHEHNAI

STILL RUNNING AT

Delhi	—	32 nd Week
Lucknow		32 nd Week
Cawnpur		28 th Week
Karachi		26 th Week
Bombay		24 th Week

— NOW SEE AT —

WOODLANDS

ವುಡ್‌ಲ್ಯಾಂಡ್ಸ್

20—2—48 ರಿಂದ

ಇಂದುಮತಿ, ರೆಹಾನಾ

ನಾಜಿರ್ ಖಾನ್

ಪಾತ್ರವಹಿಸಿರುವ

ಷೆನಾಯ್

(ಅಮೋಘ ಹಿಂದೀ ಚಿತ್ರ)

ಪ್ರತಿ ದಿನ 3 ಆಟಗಳು

—An Evershine Release —

Woodlands

Morning Shows at 10-30

For 4 Days From 20—2—48

— ಬೆಳಗಿನ ಪ್ರದರ್ಶನ —

ಮಾಸ್ಟರ್ ಕಿಶೋರಿ – ಮೆಹರುನ್ನೀಸ

ಪಾತ್ರವಹಿಸಿರುವ

ಭೇಡಿದುಶನ್

At Opera

From 20–2–48

BIG NOISE

— with —

LAURAL & HARDY

Daily 3 Shows

Morning Shows from 20-2-48

ನೀವು ಮರೆತಿರಿ. ನೀವೀಗ ಹಿಂದೂ, ಅನರ್ಥವಾದೀತು' ಎಂದು ಮರಾಟಿ ಹುಡುಗಿಯು ಅತನ ಕೋಟನ್ನು ಎತ್ತಿಕೊಟ್ಟಳು. ಜನಸಂಚಾರವು ಮರೆಯಾಯಿತು. ಇನ್ನೊಬ್ಬಳು ಟೊಪ್ಪಿಯನ್ನಿಟ್ಟು ಶಿಖೆಯನ್ನು ಅಡಗಿಸಿದಳು.

ಯುವಕನು 'ಸರಿ—ಸರಿ. ನಾನೀ ವಿಷಯ ಮಾತನಾಡಿ ಬರುವೆನು' ಎಂದು ಎದ್ದ. ಹುಡುಗಿಯರು ಕಾತರರಾಗಿ 'ಬೇಡ, ನೀವು ನಮ್ಮನ್ನು ಮರೆತು ಬಿಡುವಿರೋ ಏನೂ, ನಿಮಗೆ ಬೇರೆ ಕೆಲಸಗಳಿರಬಹುದು, ಆ ಮುಠ್ಠಾಳರಲ್ಲಿ ಏನೆಂದು ಮಾತನಾಡುವಿರಿ ಅವರು ಗಳಿಗೆಗೊಂದು ಅಡುವರು ಸ್ವಲ್ಪ ನಿಧಾನಿಸಿ ಯೋಚಿಸಿಕೊಳ್ಳಿರಿ ಸ್ವಲ್ಪ ಹಣ ಕಾಸುಗಳನ್ನು ಸುರಿಸದೆ ಮಾತ್ರೆ ನಡೆಯುವ ಹಾಗಿಲ್ಲ' ಎಂದು ಮುಂತಾಗಿ ಹೇಳುತ್ತಾ ಯುವಕನನ್ನು ತಡೆದರು.

ಅಷ್ಟರಲ್ಲಿ ಮುಂಚಿ ಹುಡುಗಿಯು 'ಈಗ ರಾತ್ರಿಯಾಗಿದೆ ಗೇಟು ಮುನುಷ್ಯನಲ್ಲದೆ ಬೇರಾರೂ ನಿಮಗೆ ಸಿಗರು ಈ ರಾತ್ರಿ ಇಲ್ಲೇ ವಾಲಗಿದ್ದು ಬೆಳಿಗ್ಗೆ ಮುಂದಿನ ಕಾರ್ಯ ನೋಡಬಹುದಲ್ಲ' ಎಂದಳು.

'ಹಾಗೇನು? ಗೇಟಿನವನನ್ನು ವಶ ಪಡಿಸಿಕೊಂಡು ನಾವೀಗಲೇ ಹೊಂಟು ಹೋದರೇನು?' ಎಂದು ಯುವಕನ ದ ಹುಡುಗಿಯರು 'ಅದಾಗದು ಹೆ ಎವುದೆಲ್ಲಿಗೆ ಎಲ್ಲೆಲ್ಲೂ ಅವರೇ ವರಷ್ಟು ಅಜಾಗ್ರತೆಯಿಂದಿಲ್ಲ ನ ಸುರಕ್ಷಿತ ಸ್ಥಳದಿಂದ ಬಹುದೂರ ನ ರುವೆವು' ಎಂದಳು. ಯುವಕನಿಗೆ ಕೃತ ಏನನ್ನೂ ಮಾಡಲೂ ತೋರಲಿಲ್ಲ ದರೆ ರಾತ್ರಿ ಅಲ್ಲೇ ನಿಲ್ಲಲೂ ಇಷ್ಟವಿಲ್ಲ.

(ನಾಳೇ ಸಂಚಿಕೆ ಮುಂದಕ್ಕೆ)

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರ ಸಂಚಿಕೆ ವಾರ್ಷಿಕಚಂದಾ ಪಂಸ್ಥಳಕ್ಕೆ ಅಂಚೆವೆಚ್ಚ ಸೇರಿ 1–13–0

ಶಕ್ತಿ